## ತರಳಬಾಳು ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್, ಸಿರಿಗೆರೆ

## ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ

# ಶೇಂಗಾ




ಶ್ರೀ ಮಲ್ಲಿಕಾರ್ಜುನ ಬಿ.ಓ.,
ವಿಷಯ ತಜ್ಞರು(ಬೇಸಾಯ ಶಾಸ್ತ್ರ)

ಡಾ|| ದೇವರಾಜ ಟಿ.ಎನ್.,
ಕಾರ್ಯಕ್ರಮ ಸಂಯೋಜಕರು



## ತರಳಬಾಳು ಕೃಷಿ ವಿಜ್ಞಾನ ಕೇಂದ್ರ

ದಾವಣಗೆರೆ.

2013

# ಶೇಂಗಾ

ಶೇಂಗಾ ಒಂದು ಮುಖ್ಯ ಎಣ್ಣೆಕಾಳು ಹಾಗೂ ದ್ವಿದಳ ದಾನ್ಯ ಬೆಳೆ. ಭಾರತವು ಅತಿ ದೊಡ್ಡ ಪ್ರಮಾಣದಲ್ಲಿ ಶೇಂಗಾವನ್ನು ಉತ್ಪಾದಿಸುತ್ತಿರುವ ಏಕೈಕ ರಾಷ್ಟ್ರವಾಗಿದೆ. ರಾಜ್ಯದ ಒಟ್ಟು ಎಣ್ಣೆಕಾಳು ಉತ್ಪಾದನೆಯ ಶೇಕಡ 70ರಷ್ಟು ಶೇಂಗಾದ ಕೊಡುಗೆ ಇದೆ. ದೇಶದ ಒಟ್ಟು ಸಾಗವಳಿ ಮಾಡುವ ಭೂಮಿಯಲ್ಲಿ ಶೇ. 10–12 ರಷ್ಟು ಭೂಮಿಯಲ್ಲಿ ಶೇಂಗಾವನ್ನು ವ್ಯವಸಾಯ ಮಾಡುತ್ತಿದ್ದಾರೆ. ಶೇಂಗಾವನ್ನು ಹೆಚ್ಚಾಗಿ ಕರ್ನಾಟಕ, ಗುಜರಾತ್, ಮಹಾರಾಷ್ಟ್ರ, ತಮಿಳುನಾಡು ಹಾಗೂ ಆಂದ್ರಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 60ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, 3.5 ಲಕ್ಷಟನ್ ಉತ್ಪಾದನೆ ಇದೆ. ನಮ್ಮ ರಾಜ್ಯದಲ್ಲಿ ಶೇಂಗಾವನ್ನು ಹೆಚ್ಚಿನ ಪ್ರಮಾಣದಲ್ಲಿ ತುಮಕೂರು, ಚಿತ್ರದುರ್ಗ, ಬಾಗಲಕೋಟ, ಬಿಜಾಪುರ, ರಾಯಚೂರು, ಗುಲ್ಬರ್ಗ, ಯಾದಗಿರಿ, ಬಳ್ಳಾರಿ, ಬೆಳಗಾವಿ, ಧಾರವಾಡ, ಗದಗ, ಹಾವೇರಿ ಹಾಗೂ ದಾವಣಗೆರೆ. ನಮ್ಮ ರಾಜ್ಯದ ಸರಸಾರಿ ಇಳುವರಿ (686 ಕೆಜಿ/ಹೆ.) ಪ್ರಪಂಚದ ಇಳುವರಿಗಿಂತ (1336 ಕೆಜಿ/ಹೆ) ಶೇ. 50 ರಷ್ಟು ಕಡಿಮೆ ಇದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದ ಇಳುವರಿ ಕಡಿಮೆಯಾಗಲು ಕಾರಣ ನಾವು ಶೇ. 75–80 ರಷ್ಟು ಶೇಂಗಾವನ್ನು ಮಳೆಯಾಶ್ರಿತದಲ್ಲಿ ಬೆಳೆಯಾಗುತ್ತಿದೆ. ಉತ್ಪಾದಿಸಲ್ಪಟ್ಟ ಶೇಂಗಾವನ್ನು ಶೇ. 85ರಷ್ಟು ಎಣ್ಣೆ ತಯಾರಿಕೆಗಾಗಿ ಉಪಯೋಗಿಸಲಾಗುತ್ತಿದೆ.

**ಮಣ್ಣು :**

ಶೇಂಗಾ ಬೆಳೆಗೆ ಆಯ್ಕೆ ಮಾಡಿದ ಜಮೀನು ಹಗುರದಿಂದ ಮಧ್ಯಮ ಸಾಂದ್ರತೆಯಿಂದ ಕೂಡಿದ ಚೆನ್ನಾಗಿ ಗಾಳಿಯಾಡುವ ಮರಳು ಮಿಶ್ರಿತ ಕೆಂಪು ಅಥವಾ ಕಪ್ಪು ಮಣ್ಣು ಆಗಿರಬೇಕು. ಗೆದ್ದಲು ಪಿಡಿತ ಹಾಗೂ ನೀರು ನಿಲ್ಲುವ ಜೌಗು ಭೂಮಿಯಲ್ಲಿ ಯಾವುದೇ ಕಾರಣಕ್ಕೂ ಶೇಂಗಾ ಬೆಳೆಯಬಾರದು. ಏಕೆಂದರೆ ಅಂತಹ ಜಮೀನಿನಲ್ಲಿ ಬೆಳೆಯುವುದರಿಂದ ಇಳುವರಿ ಕಡಿಮೆಯಾಗುವುದರ ಜೊತೆಗೆ ಕಾಯಿಗಳಿಗೆ ಶಿಲೀಂದ್ರದ ವಿಷ ಸೋಂಕು(ಅಪ್ಲೋಟಾಕ್ಸಿನ್) ರೋಗ ಬರುತ್ತದೆ.


ಜಿ.ಎಲ್–24

## ಸುಧಾರಿತ ತಳಿಗಳ ಆಯ್ಕೆ

| ತಳಿ | ಅವಧಿ (ದಿವಸಗಳು) | ಹಂಗಾಮು | ವಿಶೇಷ ಗುಣಗಳು |
|---|---|---|---|
| ಟಿ.ಎಂ.ವ್ಹಿ–2 | 105–110 | ಮುಂಗಾರು/ಬೇಸಿಗೆ | ಸಮ ಗಾತ್ರದ ಕಾಳುಗಳನ್ನು ಹೊಂದಿದ್ದು ಸಧ್ಯ ಸಾಗುವಳಿಯಲ್ಲಿರುವ ತಳಿ. |
| ಜಿ.ಪಿ.ಬಿ.ಡಿ–4 | 105–110 | ಮುಂಗಾರು | ಸಮ ಗಾತ್ರದ ಕಾಳುಗಳ ತಳಿಯಾಗಿದ್ದು, ಎಲೆ ಚುಕ್ಕೆ ಹಾಗೂ ತುಕ್ಕು ರೋಗಗಳಿಗೆ ನಿರೋಧಕ ಶಕ್ತಿ ಹೊಂದಿದೆ |
| ಜಿ.ಎಲ್–24 | 95–105 | ಮುಂಗಾರು | ದಪ್ಪಕಾಳಿನ ತಳಿಯಾಗಿದ್ದು ಸ್ವಲ್ಪ ಮಟ್ಟಿಗೆ ಬರ ನಿರೋಧಕ ಶಕ್ತಿ ಹೊಂದಿದೆ. |
| ಟಿ.ಎ.ಜಿ–24 | 110–115 | ಹಿಂಗಾರು/ಬೇಸಿಗೆ | ದೊಡ್ಡ ಗಾತ್ರದ ಬೇಗನೆ ಮಾಗುವ ಗಿಡ್ಡ ತಳಿ. |
| ಐ.ಸಿ.ಜಿ.ವಿ.–91114 | 110–120 | ಮುಂಗಾರು | ಒಣ ಪ್ರದೇಶಕ್ಕೆ ಸೂಕ್ತವಾದ ತಳಿ |
| ಕೆ.ಸಿ.ಜಿ.–6 | 115–120 | ಮುಂಗಾರು | ದಪ್ಪಕಾಳಿನ ತಳಿಯಾಗಿದ್ದು ರಫ್ತು ಮಾಡಲು ಸೂಕ್ತ. |




## ಬೀಜೋಪಚಾರ

ಶಿಲೀಂದ್ರನಾಶಕಗಳಿಂದ ಬೀಜೋಪಚಾರ : ಪ್ರತಿ ಕಿ. ಗ್ರಾಂ ಬಿತ್ತನೆ ಬೀಜಗಳನ್ನು 3 ಗ್ರಾಂ ಕ್ಯಾಪ್ಟಾನ್ ಅಥವಾ 3 ಗ್ರಾಂ ಥೈರಾಮ್ ಎಂಬ ಶಿಲೀಂದ್ರನಾಶಕದಿಂದ ಬೀಜೋಪಚಾರ ಮಾಡಬೇಕು ಅಥವಾ ಪ್ರತಿ ಕಿ. ಗ್ರಾಂ ಬಿತ್ತನೆ ಬೀಜಗಳನ್ನು 4 ಗ್ರಾಂ ಟ್ರೈಕೋಡರ್ಮಾ ಎಂಬ ಶಿಲೀಂದ್ರದಿಂದ ಕೂಡಾ ನಾವು ಬೀಜೋಪಚಾರ ಮಾಡಬಹುದು. ಹೀಗೆ ಬೀಜೋಪಚಾರ ಮಾಡುವುದರಿಂದ ಕತ್ತು ಹಾಗೂ ಬುಡ ಕೊಳೆ ರೋಗದ ಹತೋಟಿ ಮಾಡಬಹುದು.





## ಅಣುಜೀವಿ ಗೊಬ್ಬರದಿಂದ ಬೀಜೋಪಚಾರ

* ಪ್ರತಿ ಕಿ. ಗ್ರಾಂ ಬಿತ್ತನೆ ಬೀಜಗಳನ್ನು 10 ರಿಂದ 12 ಗ್ರಾಂ ರೈಜೋಬಿಯಂ ಅಣುಜೀವಿ(ಸಾರಜನಕ ಗೊಬ್ಬರದ ಪ್ರಮಾಣವನ್ನು ಶೇ 15 ರಂದ 25 ರಷ್ಟು ಕಡಿಮೆ ಮಾಡಬಹುದಾಗಿದೆ.) ಮತ್ತು 10 ರಿಂದ 12 ಗ್ರಾಂ ರಂಜಕ ಕರಗಿಸುವ ಅಣುಜೀವಿ ಗೊಬ್ಬರದಿಂದ ಬೀಜೋಪಚಾರ ಮಾಡಬೇಕು.


ಬೇರಿನಲ್ಲಿ ಸಾರಜನಕ ಸ್ಥಿರೀಕರಣ ಹೊಂದುವ ಗಂಟುಗಳು

## ಪ್ರತಿ ಎಕರೆಗೆ ಬೇಕಾಗುವ ಪರಿಕರಗಳು :

| | | | |
|---|---|---|---|
| ಬೀಜ | : 40 ಕೆಜಿ | **ರಸಾಯನಿಕ ಗೊಬ್ಬರಗಳು** | |
| ಕಾಂಪೋಸ್ಟ್ | : 3 ಟನ್ | ಸಾರಜನಕ : ರಂಜಕ : ಪೋಟಾಷ್ | |
| ಎರೆಗೊಬ್ಬರ | : 4 ಕ್ವಿಂಟಾಲ್ | 10 ಕೆಜಿ : 20 ಕೆಜಿ : 20 ಕೆಜಿ | |
| ರೈಜೋಬಿಯಂ | : 1 ಕೆಜಿ | ಜಿಪ್ಸಂ | : 200ಕೆಜಿ |
| ಪಿ.ಎಸ್.ಬಿ. | : 1 ಕೆಜಿ | ಜಿಂಕ್ ಸಲ್ಫೇಟ್ | : 10 ಕೆಜಿ |
| ಟ್ರೈಕೋಡರ್ಮಾ | : 4 ಗ್ರಾಂ/ ಕೆಜಿ ಬೀಜಕ್ಕೆ | ಕಬ್ಬಿಣ ಸಲ್ಫೇಟ್ | : 10 ಕೆಜಿ |

* ಬಿತ್ತುವ ಸಮಯದಲ್ಲಿ ಮಳೆಯಾಶ್ರಿತ ಬೆಳೆಗೆ 45 ಕಿ.ಗ್ರಾಂ ಡಿಎಪಿ ಹಾಗೂ 17 ಕಿ.ಗ್ರಾಂ ಎಂಒಪಿ ಗೊಬ್ಬರಗಳನ್ನು ಕೊಡಬೇಕು.
* ನೀರಾವರಿ ಬೆಳೆಗೆ 65 ಕಿ. ಗ್ರಾಂ ಡಿಎಪಿ ಹಾಗೂ 17 ಕಿ.ಗ್ರಾಂ ಎಂಒಪಿ ಗೊಬ್ಬರಗಳನ್ನು ಕೊಡಬೇಕು

**ಲಘು ಪೋಷಕಾಂಶಗಳು :**

* ಲಘು ಪೋಷಕಾಂಶಗಳ ಕೊರತೆ ಇರುವ ಪ್ರದೇಶಗಳಲ್ಲಿ ಹೆಚ್ಚಿನ ಇಳುವರಿ ಪಡೆಯಲು ಸಾರಜನಕ, ರಂಜಕ ಮತ್ತು ಪೋಟ್ಯಾಶ್ ಒದಗಿಸುವ ರಸಗೊಬ್ಬರಗಳನ್ನಲ್ಲದೇ ಕಬ್ಬಿಣ ಅಥವಾ ಸತುವು ಪೋಷಕಾಂಶಗಳನ್ನು ಬಳಸುವುದು ಅತೀಸೂಕ್ತ.

**ಬಿತ್ತನೆ ಸಮಯ :**

ಜೂನ್ – ಜುಲೈ ತಿಂಗಳು ಸೂಕ್ತವಾದ ಬಿತ್ತನೆ ಸಮಯ ಬೆಸಿಗೆ ಶೇಂಗಾದಲ್ಲಿ ನವಂಬರ್–ಡಿಸೆಂಬರ್ 20ರೊಳಗೆ ಬಿತ್ತಿದರೆ ಅಧಿಕ ಇಳುವರಿ ಪಡೆಯಬಹುದು.

**ಒಂಚೂರು ಇಲ್ನೋಡಿ :** ರೈತರು ಬೀಜೋಪಚಾರ ಮಾಡುವಾಗ ಗಮನಿಸಿ.

* ಮೊದಲು ರಾಸಾಯನಿಕ ಪದಾರ್ಥಗಳಿಂದ ಬೀಜೋಪಚಾರ ಮಾಡಿ.
* ನಂತರ ಜೈವಿಕ ಗೊಬ್ಬರಗಳಿಂದ ಬೀಜೋಪಚಾರ ಮಾಡಿ.

**ಶೇಂಗಾ ಬಿತ್ತನೆ ಪದ್ಧತಿಗಳು**

ಗೆಜ್ಜೆ ಶೇಂಗಾ ತಳಿಗಳ ಬೀಜಗಳನ್ನು 30 ಸೆಂ. ಮೀ. ಅಂತರದ ಸಾಲುಗಳಲ್ಲಿ 10 ಸೆಂ. ಮೀ. ಅಂತರಕ್ಕೊಂದರಂತೆ ಶೇಂಗಾ ಬಿತ್ತುವ ಕೂರಿಗೆಯಿಂದ ಬಿತ್ತಬೇಕು.


ಕೈಗಾಳು ಶೇಂಗಾ ಬಿತ್ತನೆ


ಕೂರಿಗೆ ಶೇಂಗಾ ಬಿತ್ತನೆ


ಸೆಡ್ಡೆಯಲ್ಲಿ ಬಿತ್ತನೆ

**ಅಂತರ ಬೇಸಾಯ ಮತ್ತು ಕಳೆ ನಿರ್ವಹಣೆ:**

ಬಿತ್ತನೆ ಮಾಡಿದ 15, 30 ಮತ್ತು 40 ದಿವಸಗಳ ನಂತರ ಎಡೆಕುಂಟೆ ಹಾಯಿಸಿ ಕಳೆ ನಿಯಂತ್ರಣ ಮಾಡುವುದರ ಜೊತೆಗೆ ಬೋದನ್ನು ಏರಿಸಬೇಕು.

**ಕಳೆ ನಾಶಕ :**

ಬೀಜ ಬಿತ್ತಿದ ದಿನ/ ಮರು ದಿನ :

ಒಂದು ಲೀ. ಅಲಾಕ್ಲೋರ್ 50 EC / 0.5 ಕೆಜಿ ಪೆಂಡಾಮಿಥಿಲಿನ್ 30 EC ಕಳೆನಾಶಕವನ್ನು 400ಲೀ. ನೀರಿನಲ್ಲಿ ಬೆರೆಸಿ ಮಣ್ಣಿನ ಮೇಲೆ ಸಾಕಷ್ಟು ತೇವಾಂಶವಿದ್ದಾಗ ಸಿಂಪಡಿಸಬೇಕು.



ಬಿತ್ತುವ ಮೊದಲು : ಒಂದು ಲೀ. ಫ್ಲುಕ್ಲೋರಾಲಿನ್ 45 EC 400 ಲೀಟರ್ ನೀರಿನಲ್ಲಿ ಬೆರೆಸಿ 8 ರಿಂದ 15 ದಿವಸಗಳ ಮೊದಲು ಸಿಂಪಡಿಸಬೇಕು.

## ಅಂತರ ಬೆಳೆಗಳು :




ಶೇಂಗಾ ಬೆಳೆಯಲ್ಲಿ ಲಾಭದಾಯಕ ಅಂತರ ಬೆಳೆ ಪದ್ಧತಿಯಲ್ಲಿ ತೊಗರಿ, ಹತ್ತಿ, ಮೆಣಸಿನಕಾಯಿ ಅಂತರ ಬೆಳೆಯಾಗಿ ಬೆಳೆಯುವುದು ಆರ್ಥಿಕವಾಗಿ ಸೂಕ್ತ.







### ನೀರಾವರಿ :

ಬಿತ್ತನೆ ಸಮಯದಲ್ಲಿ ಒಂದು ಬಾರಿ ನೀರು ಹಾಯಿಸಿ ಬಿತ್ತನೆ ಮಾಡಬೇಕು. ಬೀಜ ಪೂರ್ತಿ ಹುಟ್ಟಿದ ನಂತರ 25 ದಿನಗಳವರೆಗೆ ನೀರು ಕೊಡಬಾರದು. ಬೆಸಿಗೆ ಬೆಳೆಯಲ್ಲಿ ಹವಾಗುಣಕ್ಕೆ ಅನುಗುಣವಾಗಿ ಬೆಳೆಗೆ 10 ರಿಂದ 12 ದಿನಗಳಿಗೊಮ್ಮೆ ನೀರು ಕೊಡಬೇಕು.

### ಸಂದಿಗ್ಧ ಹಂತಗಳು :

ಶೇಂಗಾದಲ್ಲಿ ಹೂವಾಡುವ ಹಂತ (ಬಿತ್ತಿದ 30 – 35 ದಿವಸಗಳು), ಬಾರಂಗಿ ಬಿಡುವ ಹಂತ (ಬಿತ್ತಿದ 50 – 60 ದಿವಸಗಳು) ಮತ್ತು ಕಾಯಿ ಆಗುವ/ಬಲಿಯುವ ಹಂತ (ಬಿತ್ತದ 70–80 ದಿವಸಗಳು) ಗಳು ಇಳುವರಿ ದೃಷ್ಟಿಯಿಂದ ಈ ಸಮಯದಲ್ಲಿ ನೀರನ್ನು ಬೆಳೆಗೆ ತಪ್ಪದೇ ಕೊಡಬೇಕು.

### ಕೊಯ್ಲು :

ಶೇಂಗಾ ಬೆಳೆಯು ಪೂರ್ತಿ ಬೆಳವಣಿಗೆ ನಂತರ ಗಿಡದ ಕೆಳ ಭಾಗದ ಎಲೆಗಳು ಹಳದಿ ತಿರುಗಿ ಉದುರತೊಡಗಿದಾಗ, ಬೆಳೆಯನ್ನು ಕಟಾವು ಮಾಡಬೇಕಾಗುತ್ತದೆ.

* ಶೇಂಗಾವನ್ನು ತೇವಾಂಶ 30 ರಿಂದ 35ರಷ್ಟು ಇದ್ದಾಗ ಕೊಯ್ಲು ಮಾಡಬೇಕು.
* ಗಿಡವನ್ನು ಕಿತ್ತ ನಂತರ 2–3 ದಿನಗೊಳಾಗಾಗಿ ಒಣಗಿಸುವುದು.
* ಹಾಳಾದ ಕಾಳುಗಳು ರುಚಿ ಮತ್ತು ವಾಸನೆಯನ್ನು ಕಳೆದುಕೊಂಡು ಅಫ್ಲೋಟಾಕ್ಸಿನ್ ಎಂಬ ವಿಷಯುಕ್ತ ಪದಾರ್ಥವನ್ನು ಉತ್ಪಾದಿಸುತ್ತವೆಯಾದ್ದರಿಂದ ಹಾಳಾಗದಂತೆ ಎಚ್ಚರವಹಿಸುವುದು.





## ಶೇಂಗಾದಲ್ಲಿ ನಮ್ಮ ಅನುಭವ :






ತರಳಬಾಳು ಕೃಷಿ ವಿಜ್ಞಾನ ಕೇಂದ್ರವು ಶೇಂಗಾದಲ್ಲಿ ಇಳುವರಿಯನ್ನು ಹೆಚ್ಚಿಸಲು ನವೀನ ತಳಿಯಾದ ಜಿಪಿಬಿಡಿ-4ನ್ನು ಮುಂಚೂಣಿ ಪ್ರಾತ್ಯಕ್ಷಿಕೆಯ ಮೂಲಕ ಆಲೂರು ಗ್ರಾಮದಲ್ಲಿ ಹಮ್ಮಿಕೊಂಡಿದ್ದೇವು. ಈ ತಳಿಯು ಉತ್ತಮ ಇಳುವರಿ ಕೊಡುವುದರ ಜೊತೆಗೆ ಗುಣಮಟ್ಟವಾದ ಮೇವು ದೊರೆಯುತ್ತದೆ. ಈ ಗ್ರಾಮದಲ್ಲಿ ಶೇ. 40% ರೈತರು ಈ ತಳಿಯನ್ನು ಬೆಳೆಯುತ್ತಾರೆ.

ಈ ವರ್ಷ 2013-14 ಸಾಲಿನಲ್ಲಿ ಶೇಂಗಾದಲ್ಲಿ ವಿವಿಧ ತಳಿಗಳ ಸಾಮರ್ಥ್ಯ ತುಲನೆ ಎಂಬ ಕ್ಷೇತ್ರ ಪ್ರಯೋಗವನ್ನು ಹಮ್ಮಿಕೊಂಡಿದ್ದೇವು.




### ಕ್ಷೇತ್ರ ಪ್ರಯೋಗದ ಫಲಿತಾಂಶ

| ವ್ಯವಸಾಯ ಪದ್ಧತಿ | ಪರೀಕ್ಷಿಸಲಾದ ತಂತ್ರಜ್ಞಾನ | ಉತ್ಪಾದನೆ ಕ್ವಿ./ಹೆ. | ಅನುಪಾತ ಖರ್ಚು-ವೆಚ್ಚ |
|---|---|---|---|
| ಮಳೆಯಾಶ್ರಿತ | $T_1$-TMV-2 | 15.1 | 1.62 |
| | $T_2$-KCG-6 | 16.3 | 1.67 |
| | $T_3$-GPBD-4 | 18.9 | 2.06 |
| | $T_4$-ICGV-91114 | 17.23 | 1.77 |









GPBD-4 ತಳಿಯು ಎಲೆ ಚುಕ್ಕೆ ರೋಗಕ್ಕೆ ನಿರೋಧಕ ಹೊಂದಿದ್ದು ಮೇವಿನ ಇಳುವರಿಯು ಸಹ ಉತ್ತಮ ವಾಗಿದೆ.



ಕ್ಷೇತ್ರೋತ್ಸವ




## ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :


ಕಾರ್ಯಕ್ರಮ ಸಂಯೋಜಕರು

**ತರಳಬಾಳು ಕೃಷಿ ವಿಜ್ಞಾನ ಕೇಂದ್ರ**

ಎಲ್.ಐ.ಸಿ. ಕಾಲೋನಿ ಲೇಔಟ್,
ಬಿ.ಐ.ಇ.ಟಿ. ಕಾಲೇಜ್ ರಸ್ತೆ, ದಾವಣಗೆರೆ - 577 004.
ಫೋ : 08192-263462, ಫ್ಯಾಕ್ಸ್ : 08192-260969
e-mail : dvgtkvk@yahoo.com website : taralabalukvk.com